**ಸಾಕ್ಷಿಯನ್ನು ದಿನಾಂಕ 23.10.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ನಾನೇ ಸಹಿ ಮಾಡಿರುತ್ತೇನೆ.

ಅಧಿಕಾರ ಪತ್ರವನ್ನು ನಿ.ಆರ್.1, ಪಾಲಿಸಿಯನ್ನು ನಿ.ಆರ್.2, 1ನೇ ಎದುರುದಾರರಿಗೆ ಕಳುಹಿಸಿದ ನೋಟೀಸಿನ ಪ್ರತಿಯನ್ನು ನಿ.ಆರ್.3, ಅಂಚೇ ಸ್ವೀಕೃತಿ ಪತ್ರವನ್ನು ನಿ.ಆರ್.4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1ನೇ ಎದುರುದಾರರ ಪರ ವಕೀಲರಿಂದ**

ಅಪಘಾತ ಕಾಲಕ್ಕೆ ಲಾರಿ ನಂಬರ್ ಕೆಎ-63/8631ರ ವಿಮೆ ಚಾಲ್ತಿಯಲ್ಲಿತ್ತು ಅಂದರೆ ಸರಿ. ಅಪಘಾತ ಕಾಲಕ್ಕೆ ಸದರಿ ಲಾರಿ ಚಾಲಕನ ಚಾಲನಾ ಪತ್ರ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 1ನೇ ಎದುರುದಾರರು ವಿಮಾ ಪಾಲಿಸಿಯ ಷರತ್ತನ್ನು ಉಲ್ಲಂಘಿಸಿದೇ ಇರುವುದರಿಂದ 2ನೇ ಎದುರುದಾರರು ಅರ್ಜಿದಾರರಿಗೆ ಪರಿಹಾರ ಕೊಡಲು ಬಾದ್ಯಸ್ಥರು ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ**

ನಾನು 11 ವರ್ಷಗಳಿಂದ 2 ನೇ ಎದುರುದಾರರಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿನ ಅಂಶಗಳನ್ನು ನಾನು ಹೇಳಿ ಬರೆಸಿರುತ್ತೇನೆ. ಇನ್ಸುರೆನ್ಸ್ ಕಾಯ್ದೆಯ ಕಲಂ 64 ವಿ ಬಿ ರ ಪಾಲನೆಯಾಗಿರುತ್ತದೆ ಅಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಅರ್ಜಿದಾರರು ಮತ್ತು 3 ನೇ ಎದುರುದಾರರು ರೂ.10.50 ಲಕ್ಷವನ್ನು ಈಗಾಗಲೇ ಪಡೆದುಕೊಂಡಿರುವುದಾಗಿ ಹೇಳಿದ್ದು ಸದರಿ ಹಣ ಪರಿಹಾರ ಧನವಲ್ಲ ಅಂದರೆ ಸರಿಯಲ್ಲ. ಸದರಿ ಹಣವನ್ನು ಅರ್ಜಿದಾರರು ಮತ್ತು 3 ನೇ ಎದುರುದಾರರು ಪರಿಹಾರ ಧನವಾಗಿ ಪಡೆದುಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ.

ಲಾರಿ ನಂಬರ್ ಕೆಎ-63/8631 ರ ಚಾಲಕನಿಗೆ ಚಾಲನಾ ಪತ್ರ ಇತ್ತು ಅಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ನೀಡಲು 2 ನೇ ಎದುರುದಾರರು ಬಾದ್ಯಸ್ಥರು ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.